# ವೈಟ್‌ಹಾರ್ಸ್ ಸಂಸ್ಥೆಯಿಂದ 'ಕಲ್ಕಿ' ಕನ್ನಡ ನೂತನ ವಾಹಿನಿ

ಬೆಂಗಳೂರು: ವೈಟ್ ಹಾರ್ಸ್ ನೆಟ್‌ವರ್ಕ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆ 'ಕಲ್ಕಿ' ಎಂಬ ಕನ್ನಡದ ಸಂಪೂರ್ಣ ಮನರಂಜನಾ ವಾಹಿನಿ ಆರಂಭಿಸುತ್ತಿದೆ.

ಬದಲಾಗುತ್ತಿರುವ ಜನರ ಅಭಿರುಚಿ, ಕಲೆ, ಸಂಸ್ಕೃತಿ ಹಾಗೂ ಕನ್ನಡಿಗರ ಆಶೋತ್ತರಗಳನ್ನು ಗಮನದಲ್ಲಿಟ್ಟುಕೊಂಡು ವಾಹಿನಿಯನ್ನು ಪ್ರಾರಂಭಿಸಲಾಗುತ್ತಿದೆ ಎಂದು ಸಂಸ್ಥೆ ತಿಳಿಸಿದೆ. ಹೊಸ ತಂತ್ರಜ್ಞಾನಗಳಿಂದ ಕೂಡಿದ ಉಪಕರಣಗಳೊಂದಿಗೆ ಕರ್ನಾಟಕದ ಕಿರುತೆರೆಯ ಇತಿಹಾಸದಲ್ಲಿ ಮೊದಲ ಬಾರಿಗೆ ಎಚ್‌ಡಿ ಗುಣಮಟ್ಟವಿರುವ ಮನರಂಜನೆಯ ಕಾರ್ಯಕ್ರಮಗಳನ್ನು ಕಿರುತೆರೆಯ ಮೇಲೆ ತರಲಾಗುತ್ತಿದೆ ಎಂದು ವೈಟ್‌ಹಾರ್ಸ್ ನೆಟ್‌ವರ್ಕ್ ಸರ್ವೀಸಸ್ ಸಂಸ್ಥೆ ಸಂಸ್ಥಾಪಕ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಪಿ. ಕೈಲಾಸಂ ತಿಳಿಸಿದ್ದಾರೆ. ಪ್ರೇಕ್ಷಕರ ನಾಡಿಮಿಡಿತ ತಿಳಿದುಕೊಳ್ಳುವ ಉದ್ದೇಶದಿಂದ ಪ್ರತ್ಯೇಕ ತಂಡ ರಚನೆ ಮಾಡಿ ಅವಶ್ಯ ಕಾರ್ಯಕ್ರಮಗಳ ಪಟ್ಟಿ ಮಾಡುವಂತೆ ಸೂಚಿಸಲಾಗಿದೆ. ನಮ್ಮ ಉದ್ದೇಶ ಎಲ್ಲ ವಯೋಮಾನದವರಿಗೂ ಮನರಂಜನೆ ನೀಡುವುದಾಗಿದೆ ಎಂದು ಹೇಳಿದ್ದಾರೆ.



ವೀಕ್ಷಕರಿಗೆ ಹೊಸತನ, ತಾಜಾತನ ನೀಡುವುದರೊಂದಿಗೆ ಕನ್ನಡತನದ ಸಂಸ್ಕೃತಿ ಉಳಿಸಿಕೊಂಡು ಮನರಂಜನೆಯ ರಸದೌತಣ ನೀಡಲಾಗುವುದು. ಧಾರ್ಮಿಕ, ಆಧ್ಯಾತ್ಮಿಕ, ಚಿಂತನೆಗಳೊಂದಿಗೆ ಭಗವಂತನ ದರ್ಶನ, ಭಾವನೆಗಳಿಗೆ ಜೀವತುಂಬುವ, ಕಲ್ಪನೆಗೂ ಮೀರಿದ ಕಥೆಗಳು, ಧಾರವಾಹಿಗಳು, ಭರ್ಜರಿ ರಿಯಾಲಿಟಿ ಶೋಗಳು ನಿಮ್ಮ ಮನೆಗೆ ಬರಲಿವೆ. ಎಲ್ಲ ಕಾರ್ಯಕ್ರಮಗಳನ್ನು ವೀಕ್ಷಿಸಿ ಕಲ್ಕಿ ಕನ್ನಡ ವಾಹಿನಿ ಬೆಳೆಸಿ ಎಂದು ಕೈಲಾಸಂ ಮನವಿ ಮಾಡಿದ್ದಾರೆ.